**Code No. 18 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ಪ್ರಥಮ ಪತ್ರಿಕೆ

## (ವೇಗ)

ಜನವರಿ, 2016

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಶೀಘ್ರಲಿಪಿ ಟಿಪ್ಪಣಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಲಿಪ್ಯಾಂತರ ಮಾಡಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸಭಾಪತಿಯವರೆ, ಸನ್ಮಾನ್ಯ ವಿಧಾನಮಂಡಲದ ಸದಸ್ಯರೆ,

ಕರ್ನಾಟಕ ರಾಜ್ಯ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮನ್ನು ಸ್ವಾಗತಿಸಲು
$\frac{1}{4}$ ನನಗೆ/ ಬಹಳ ಸಂತೋಷವಾಗುತ್ತದೆ. ಕಳೆದ ವರ್ಷ ರಾಜ್ಯದ ಹಲವು ಭಾಗಗಳಲ್ಲಿ ರೈತ ಚಳುವಳಿಯು ತೀವ್ರವಾಗಿ ನಡೆಯಿತು. ಈ ಚಳುವಳಿಯು ಮೈಸೂರು ಮತ್ತು ರಾಮನಗರ
$\frac{1}{2}$ ಮುಂತಾದ ಹಲವು/ ಜಿಲ್ಲೆಗಳಲ್ಲಿ ಶಾಂತಿಯುತವಾಗಿ ನಡೆದರೂ ಸಹ ಇನ್ನು ಕೆಲವು ಜಿಲ್ಲೆಗಳಲ್ಲಿ ತೀವ್ರ ಹಿಂಸಾತ್ಮಕ ರೂಪದಲ್ಲಿ ನಡೆಯಿತು. ಆ ಜಿಲ್ಲೆಗಳಲ್ಲಿ ನಡೆದ
$\frac{3}{4}$ ಚಳುವಳಿಯಲ್ಲಿ ಅನಾವಶ್ಯಕವಾಗಿ/ ಜೀವಹಾನಿಗಳಾದವು. ಅಲ್ಲದೆ, ಅನಾವಶ್ಯಕವಾಗಿ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟಾಯಿತು. ಚಳುವಳಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಹಲವಾರು
ದಶಕಗಳಿಂದಲೂ ಪರಿಹಾರ ಒದಗಿಸುವುದುX 1
ಸಾಧ್ಯವಾಗಿರಲಿಲ್ಲ. ಆದ್ದರಿಂದ ಅವುಗಳಿಗೆ ಕ್ಷಿಪ್ರ ಪರಿಹಾರ ಒದಗಿಸಲು ಅಸಾಧ್ಯವಾಯಿತು. ಸದರಿ ವಿಷಯದ ಬಗ್ಗೆ ನಮ್ಮ ಸರ್ಕಾರವು ತಕ್ಷಣ
ನಿರ್ಧಾರಿತ ಕ್ರಮವನ್ನು ಕೈಗೊಂಡು ರೈತರ/ $\frac{1}{4}$
ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸಲು ಆದೇಶಗಳನ್ನು ಹೊರಡಿಸಿತು. ರೈತರು ಮತ್ತು ಸಮಾಜದ ಇತರ ವರ್ಗದ ಜನರು ತಾವೆಲ್ಲರೂ
ಸಮಾಜದ ಭಾಗ ಎಂಬುದನ್ನು ಅರಿಯಬೇಕು./ $\frac{1}{2}$
ಅಲ್ಲದೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹಿಂಸಾತ್ಮಕ ಚಳುವಳಿಗೆ ಎಡೆಮಾಡಿಕೊಡಬಾರದು

[ Turn over

ಎಂಬುದನ್ನು ಅರಿತುಕೊಳ್ಳಬೇಕೆಂದು
ತಿಳಿಸಬಯಸುತ್ತೇನೆ.

ವರ್ಷದ ಪ್ರಥಮ ಅವಧಿಯಲ್ಲಿ
$\frac{3}{4}$ ಹಲವಾರು/ ಜಿಲ್ಲೆಗಳಲ್ಲಿ ಬಾರೀ ಅತಿವೃಷ್ಟಿ
ಉಂಟಾಯಿತು. ಹಾಗೆಯೇ ರಾಜ್ಯದ ಅನೇಕ
ಜಿಲ್ಲೆಗಳಲ್ಲಿ ತೀವ್ರ ಅಭಾವ ಉಂಟಾಗಿರುತ್ತದೆ.
ಈ ನೆರೆ ಹಾವಳಿ ಮತ್ತು ಕ್ಷಾಮದ
2 ಪರಿಣಾಮದಿಂದ ಈ ಪ್ರದೇಶಗಳ ಜನರುX
ಅಪಾರ ಕಷ್ಟನಷ್ಟಗಳನ್ನು ಅನುಭವಿಸುವಂತೆ
ಆಗಿರುತ್ತದೆ. ನೆರೆ ಹಾವಳಿಗೆ ತುತ್ತಾದ ಜನರಿಗೆ
ನಮ್ಮ ಸರ್ಕಾರವು ಆಹಾರ, ಇತರ ಅಗತ್ಯ
ಮೂಲ ಸೌಕರ್ಯಗಳನ್ನು ಪರಿಹಾರ
$\frac{1}{4}$ ರೂಪದಲ್ಲಿ/ ನೀಡಿರುತ್ತದೆ. ಕ್ಷಾಮಪೀಡಿತ
ಪ್ರದೇಶಗಳಲ್ಲಿ ಆಹಾರ ಧಾನ್ಯ, ಕುಡಿಯುವ
ನೀರು ಮತ್ತು ಜಾನುವಾರುಗಳಿಗೆ ಮೇವು
ಇತ್ಯಾದಿ ಸೌಲಭ್ಯಗಳನ್ನು ಪರಿಹಾರ
$\frac{1}{2}$ ಕಾಮಗಾರಿಗಳ ಮೂಲಕ ಉದ್ಯೋಗವನ್ನು/
ಒದಗಿಸುವ ದಿಸೆಯಲ್ಲಿ ಸರ್ವ ಪ್ರಯತ್ನ
ಮಾಡಲಾಗುತ್ತಿದೆ. ನಾವು ಕೇಂದ್ರ ಸರ್ಕಾರದ
ನೆರವನ್ನು ಕೋರಿದ್ದು, ಜನತೆಯ ಸಂಕಷ್ಟ
ನಿವಾರಿಸಲು ರಾಜ್ಯ ಸರ್ಕಾರಕ್ಕೆ ಕೇಂದ್ರ
$\frac{3}{4}$ ಸರ್ಕಾರವು ಸಾಕಷ್ಟು ನೆರವು/ ನೀಡುವರೆಂದು
ಆಶಿಸುತ್ತೇನೆ.

ನಮ್ಮ ಸರ್ಕಾರವು ಸ್ವಚ್ಛ ಹಾಗೂ ದಕ್ಷ
ಆಡಳಿತವನ್ನು ಒದಗಿಸುವ ಕಾರ್ಯಕ್ಕೆ
ಆದ್ಯತೆಯನ್ನು ನೀಡುತ್ತಿದೆ. ಆ ದಿಸೆಯಲ್ಲಿ
3 ಕೈಗೊಂಡ ಕಾರ್ಯಕ್ರಮಗಳು ಸಾಕಷ್ಟುX
ಫಲಕಾರಿಯಾಗಿವೆ ಎಂದು ತಿಳಿಸಲು ನನಗೆ
ಬಹಳ ಸಂತಸವಾಗುತ್ತದೆ. ಸರ್ಕಾರಿ ಅಧಿಕಾರಿ
ಹಾಗೂ ನೌಕರರ ವರ್ಗಾವಣೆ, ಸ್ಥಳ ನೇಮಕಾತಿ
ವಿಚಾರಗಳಲ್ಲೂ ಯಾವುದೇ ರೀತಿಯ ಒತ್ತಡಕ್ಕೆ
ಒಳಗಾಗದೆ/ ಇರುವ ನಮ್ಮ ಸರ್ಕಾರದ ನೀತಿ $\frac{1}{4}$
ಸ್ಥಿರವಾಗಿರುತ್ತದೆ. ಈ ನೀತಿಯಿಂದಾಗಿ ಸರ್ಕಾರಿ
ಅಧಿಕಾರಿಗಳು ಯಾವುದೇ ವಿಷಯವನ್ನು
ಕುರಿತು ಕ್ರಮಕೈಗೊಳ್ಳುವಾಗ ಅದರ
ನಿಜಾಂಶಗಳನ್ನು ಆಧರಿಸಿ/ ಯಾವುದೇ $\frac{1}{2}$
ರೀತಿಯ ಗೊಂದಲಕ್ಕೆ ಒಳಗಾಗದೆ ತಮ್ಮ
ಕರ್ತವ್ಯಗಳನ್ನು ನಿರ್ವಹಿಸಲು ಅವರಲ್ಲಿ ಒಂದು
ರೀತಿಯ ಆತ್ಮವಿಶ್ವಾಸವನ್ನು ಮೂಡಿಸಿದೆ.
ಇದು ಒಂದು ಅಮೂಲಾಗ್ರ ಬದಲಾವಣೆ
ಎಂದು/ ವಿಶೇಷವಾಗಿ ನಮೂದಿಸಲು $\frac{3}{4}$
ಸೂಕ್ತವಾದುದೆಂದು ಸನ್ಮಾನ್ಯ ಸದಸ್ಯರಿಗೆ
ಮನವರಿಕೆ ಆಗಬಹುದೆಂದು ನಾನು
ಅಂದುಕೊಂಡಿದ್ದೇನೆ.

ಪಂಚವಾರ್ಷಿಕ ಯೋಜನೆಯ ಆರ್ಥಿಕ
ಕಾರ್ಯಕ್ರಮದ ಅನುಷ್ಠಾನವನ್ನು ಮತ್ತಷ್ಟು
ಚುರುಕುಗೊಳಿಸಲುX ಅಗತ್ಯ ಕ್ರಮಗಳನ್ನು 4
ತೆಗೆದುಕೊಳ್ಳಲಾಗಿದೆ. ಈ ಕಾರ್ಯಕ್ರಮಗಳನ್ನು
ಕಾರ್ಯಗತಗೊಳಿಸುವ ವಿಷಯವನ್ನು
ಪರಿಶೀಲಿಸಲು ಜಿಲ್ಲೆ ಮತ್ತು ತಾಲ್ಲೂಕು
ಮಟ್ಟಗಳಲ್ಲಿ/ ಉಪ ಸಮಿತಿಗಳನ್ನು ರಚಿಸಲು $\frac{1}{4}$
ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಪ್ರಥಮ ಬಾರಿಗೆ
ಲೋಕಸಭಾ ಸದಸ್ಯರನ್ನು ಮತ್ತು ವಿಧಾನಸಭಾ
ಸದಸ್ಯರುಗಳನ್ನು ಈ ಸಮಿತಿಗಳ ಅಧ್ಯಕ್ಷರು

$\frac{1}{2}$ ಮತ್ತು/ ಉಪಾಧ್ಯಕ್ಷರನ್ನಾಗಿ ನೇಮಕ
ಮಾಡಲು ಅಗತ್ಯ ಕ್ರಮಗಳನ್ನು
ತೆಗೆದುಕೊಳ್ಳಲಾಗಿದೆ. ಪಂಚವಾರ್ಷಿಕ
ಯೋಜನೆಯ ಆರ್ಥಿಕ ಯೋಜನೆಗಳನ್ನು
ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಪರಿಶೀಲನೆ
$\frac{3}{4}$ ಮಾಡುವ/ಸಲುವಾಗಿ ರಾಜ್ಯ ಮಟ್ಟದಲ್ಲಿ
ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ
ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ.
ಈ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ
5 ಕಾರ್ಯರೂಪಕ್ಕೆ ತಂದರೆ ಮಾತ್ರX ರಾಜ್ಯದಲ್ಲಿ
ಸಾಮಾಜಿಕ ನ್ಯಾಯದಿಂದ ಕೂಡಿದ ಆರ್ಥಿಕ
ಅಭಿವೃದ್ಧಿ ಸಾಧ್ಯ ಎಂಬ ಪೂರ್ಣ ಅರಿವು ನಮ್ಮ
ಸರ್ಕಾರಕ್ಕೆ ಇರುತ್ತದೆ. ಇತ್ತೀಚೆಗೆ ಭಾರತ
ಸರ್ಕಾರವು ಈಗಾಗಲೇ ಇರುವ ನಾಲ್ಕು
$\frac{1}{4}$ ಪ್ರಾದೇಶಿಕ/ ಗ್ರಾಮೀಣ ಬ್ಯಾಂಕುಗಳ ಜೊತೆಗೆ
ಇನ್ನೂ ಎರಡು ಪ್ರಾದೇಶಿಕ ಗ್ರಾಮೀಣ
ಬ್ಯಾಂಕುಗಳ ಸ್ಥಾಪನೆಯ ಪ್ರಸ್ತಾಪಕ್ಕೆ ಒಪ್ಪಿಗೆ
ನೀಡಿದೆ ಎಂಬುದನ್ನು ತಿಳಿಸಲು ನನಗೆ
$\frac{1}{2}$ ಸಂತಸವಾಗುತ್ತದೆ. ಈ ಗ್ರಾಮೀಣ ಬ್ಯಾಂಕುಗಳ/
ಸ್ಥಾಪನೆಯಿಂದ ಸಣ್ಣ ರೈತರಿಗೆ, ಸೀಮಾಂತ
ರೈತರಿಗೆ, ಕೃಷಿ ಕಾರ್ಮಿಕರಿಗೆ ಮತ್ತು
ಗ್ರಾಮಾಂತರ ಕುಶಲಕರ್ಮಿಗಳಿಗೆ, ಈಗಾಗಲೇ
ದೊರೆಯುತ್ತಿರುವ ಸಾಲ ಸೌಲಭ್ಯಗಳನ್ನು
$\frac{3}{4}$ ಮತ್ತಷ್ಟು ಹೆಚ್ಚಿಸುವುದಕ್ಕೂ/ ಪಂಚವಾರ್ಷಿಕ
ಯೋಜನೆಯ ಆರ್ಥಿಕ ಕಾರ್ಯಕ್ರಮಗಳನ್ನು
ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವಲ್ಲಿ
ಸರ್ಕಾರಕ್ಕೆ ಹೆಚ್ಚಿನ ಅನುವಾಗುತ್ತದೆಂದು
ಹೇಳಬಯಸುತ್ತೇನೆ.

ಜನತೆಗೆ ಆಹಾರX ಧಾನ್ಯಗಳು, ಅಕ್ಕಿ, 6
ಸಕ್ಕರೆ, ಇತ್ಯಾದಿ ಅವಶ್ಯಕ ಸರಕುಗಳನ್ನು ನ್ಯಾಯ
ಬೆಲೆಗಳಿಗೆ ದೊರೆಯುವಂತೆ ಮಾಡುವ ತನ್ನ
ಕರ್ತವ್ಯದ ಪೂರ್ಣ ಅರಿವು ಸರ್ಕಾರಕ್ಕೆ ಇದೆ.
ಸಾರ್ವಜನಿಕ ವಿತರಣಾ ವ್ಯವಸ್ಥೆಯು/ ದಕ್ಷ $\frac{1}{4}$
ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಸೂಕ್ತ
ಏರ್ಪಾಡು ಮಾಡಲಾಗಿದೆ. ಈವರೆಗೂ ಪಡಿತರ
ಚೀಟಿಗಳನ್ನು ಹೊಂದಿಲ್ಲದ ಸಾರ್ವಜನಿಕರಿಗೆ
ಹೊಸ ಪಡಿತರ ಚೀಟಿಗಳನ್ನು ವಿತರಿಸಲು/ $\frac{1}{2}$
ಮತ್ತು ನಕಲಿ ಪಡಿತರ ಚೀಟಿಗಳನ್ನು
ರದ್ದುಪಡಿಸುವ ದೃಷ್ಟಿಯಿಂದ ಹೊಸದಾಗಿ
ಜನಗಣತಿ ಕಾರ್ಯವನ್ನು ಕೈಗೊಳ್ಳಲಾಗಿದೆ.
ಆಹಾರ ಮತ್ತು ನಾಗರಿಕ ಸರಬರಾಜು
ಇಲಾಖೆಯ ಕಾರ್ಯಗಳ/ ಶಾಖೆಯನ್ನು $\frac{3}{4}$
ಮತ್ತಷ್ಟು ಬಲಗೊಳಿಸಲಾಗಿದೆ ಎಂದು ಈ
ಮೂಲಕ ತಿಳಿಸುತ್ತೇನೆ.

ಇಷ್ಟು ಹೇಳಿ ಇದುವರೆವಿಗೂ ಶಾಂತ
ರೀತಿಯಿಂದ ಆಲಿಸಿದ ಎಲ್ಲಾ ಸದಸ್ಯರಿಗೂ
ವಂದನೆಗಳನ್ನು ಸಲ್ಲಿಸುತ್ತೇನೆ.X 7

ಮಾನ್ಯರೆ,

ಕನ್ನಡ ಭಾಷೆಯನ್ನು ರಾಜ್ಯ ಮಟ್ಟದಲ್ಲಿ
ಆಡಳಿತ ಭಾಷೆಯಾಗಿ ಜಾರಿಗೆ ತರುವುದಕ್ಕೆ
ಸಂಬಂಧಪಟ್ಟಂತೆ ಸರ್ಕಾರವು ಕಾಲಕಾಲಕ್ಕೆ
ಹೊರಡಿಸಿರುವ ಸರ್ಕಾರಿ ಆದೇಶಗಳು,
ಅಧಿಸೂಚನೆಗಳು/ ಮತ್ತು ಸುತ್ತೋಲೆಗಳನ್ನು $\frac{1}{4}$
ತಾವು ಗಮನಿಸಿರುತ್ತೀರಿ. ಕನ್ನಡವನ್ನು ಆಡಳಿತ
ಭಾಷೆಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಕೆಲವು

$\frac{1}{2}$ ಅಡ್ಡಿ ಆತಂಕಗಳು ಇರಬಹುದು. ಅವುಗಳ ಪೈಕಿ/
ಮುಖ್ಯವಾದುವು ಮಾನಸಿಕ ಅನಿಸಿಕೆಗಳು,
ಇವುಗಳಲ್ಲದೆ ಇನ್ನಿತರ ಆಡಚಣೆಗಳೂ ಇರುತ್ತವೆ.
ಆದರೆ ಕೆಲವು ಜಿಲ್ಲೆಗಳಲ್ಲಿ ಕೆಲವು
ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು
$\frac{3}{4}$ ಸ್ವಲ್ಪ/ ಆಸಕ್ತಿವಹಿಸಿ ತಮ್ಮ ಕಛೇರಿಗಳಲ್ಲಿ
ಕನ್ನಡವನ್ನು ಉಪಯೋಗಿಸಲು ಯಶಸ್ವಿಯಾದ
ಸಂದರ್ಭಗಳು ಉಂಟು. ಆದಕಾರಣ,
ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದ
8 ಕಛೇರಿಗಳಲ್ಲಿ ಕನ್ನಡದX ಬಳಕೆಗೆ ಇದು ಸೂಕ್ತ
ಸಮಯವೆಂದು ನಾನು ಭಾವಿಸಿದ್ದೇನೆ. ಮುಂದಿನ
ಕನ್ನಡ ರಾಜ್ಯೋತ್ಸವ ದಿನಕ್ಕೆ ಮುಂದೆ ಈ
ಕಾರ್ಯಕ್ರಮದಲ್ಲಿ ನಾವು ಗಮನಾರ್ಹ ಪ್ರಗತಿ
$\frac{1}{4}$ ಸಾಧಿಸಬೇಕೆಂಬುದು ನನ್ನ ಅಪೇಕ್ಷೆ./

ಜಿಲ್ಲಾಧಿಕಾರಿಗಳಾದ ತಾವು ಜಿಲ್ಲಾ ಕನ್ನಡ
ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ಮಹತ್ತರವಾದ
ಪಾತ್ರವಹಿಸಬೇಕಾಗಿರುತ್ತದೆಂದು ಬೇರೆ
ಹೇಳಬೇಕಾಗಿಲ್ಲ. ಇದಲ್ಲದೆ ಬೇರೆ ಬೇರೆ
$\frac{1}{2}$ ಇಲಾಖೆಗಳ ಜಿಲ್ಲಾ/ ಮಟ್ಟದ ಅಧಿಕಾರಿಗಳ
ಸಭೆಗಳನ್ನು ಕಾಲಕಾಲಕ್ಕೆ ಕರೆಯಲು ಮತ್ತು
ಜಿಲ್ಲೆಯಲ್ಲಿ ಆಯಾ ಇಲಾಖೆಗಳ ಎಲ್ಲಾ
ಕಛೇರಿಗಳ ಅಧಿಕಾರಿಗಳಿಗೆ, ಸಿಬ್ಬಂದಿ
$\frac{3}{4}$ ವರ್ಗದವರಿಗೆ ಕನ್ನಡದಲ್ಲಿ/ ಪತ್ರ ವ್ಯವಹಾರ
ನಡೆಸಲು ಮತ್ತು ಟಿಪ್ಪಣಿ ಬರೆಯಲು ತರಬೇತಿ
ನೀಡುವ ಬಗ್ಗೆ ಅವಶ್ಯಕ ಕ್ರಮಗಳನ್ನು
ಕೈಗೊಳ್ಳುವಂತೆ ವಿನಂತಿಸುವುದಕ್ಕೆ ಸಹಾ ನಿಮಗೆ
ಅಧಿಕಾರ ನೀಡಲಾಗಿರುತ್ತದೆ.X ಸಾಕಷ್ಟು 9
ಸಂಖ್ಯೆಯಲ್ಲಿ ಕನ್ನಡ ಶೀಘ್ರಲಿಪಿ ಮತ್ತು ಬೆರಳಚ್ಚು
ತರಬೇತಿ ಪಡೆದವರು ಲಭ್ಯವಿರುವುದರಿಂದ
ಶೀಘ್ರಲಿಪಿಗಾರರನ್ನು ಮತ್ತು ಬೆರಳಚ್ಚುಗಾರರನ್ನು
ನೇಮಿಸಿಕೊಳ್ಳುವುದಕ್ಕೆ/ ಅನುಕೂಲವಾಗಲು $\frac{1}{4}$
ಕ್ರಮಕೈಗೊಳ್ಳಬೇಕಾಗಿದೆ. ಇದಲ್ಲದೆ
ಸರ್ಕಾರದವರು ಒದಗಿಸಿರುವ ಪ್ರೋತ್ಸಾಹಧನ
ಮುಂತಾದ ಸೌಲಭ್ಯಗಳ ಪೂರ್ಣ ಉಪಯೋಗ
ಪಡೆದುಕೊಂಡು ಆಂಗ್ಲ ಬೆರಳಚ್ಚುಗಾರರು
ಮತ್ತು/ ಶೀಘ್ರಲಿಪಿಗಾರರು ಕನ್ನಡ ಬೆರಳಚ್ಚು $\frac{1}{2}$
ಮತ್ತು ಶೀಘ್ರಲಿಪಿಗಳನ್ನು ಕಲಿತುಕೊಳ್ಳುವಂತೆ
ಸೂಕ್ತ ಕ್ರಮಕೈಗೊಳ್ಳಬೇಕಾಗಿದೆ. ಈ ದಿಶೆಯಲ್ಲಿ
ನಿಮ್ಮ ಜಿಲ್ಲೆಯಲ್ಲಿ ಸಾಧಿಸಬಹುದಾದ
ಪ್ರಗತಿಯ/ ವಿವರಗಳನ್ನು ನಮಗೆ $\frac{3}{4}$
ತಿಳಿಸುತ್ತೀರೆಂದು ಹಾಗೂ ಈ ವಿಚಾರದಲ್ಲಿ
ನೀವು ವೈಯಕ್ತಿಕ ಶ್ರದ್ಧೆ ಮತ್ತು ಆಸಕ್ತಿ
ವಹಿಸುತ್ತೀರೆಂದು ನಾನು ನಂಬಿರುತ್ತೇನೆಂದು
ನಿಮಗೆ ತಿಳಿಸಬಯಸುತ್ತೇನೆ.

ಇಂತಿ ತಮ್ಮ ವಿಶ್ವಾಸಿ.X 10